# ॥श्रीमूलरामोविजयते॥

## Sri NarahariTheertharu

॥श्रीहरिसर्वोत्तमः॥ ॥श्रीवायुजीवोत्तमः॥



## ॥श्री नरहरि तीर्थगुरुभ्योनमः॥

**ससीता मूलरामार्चा कोशे गजपतेः स्थिता ।**
**येनानीता नमः तस्मै श्रीमन्नृहरिभिक्षवे॥**

ಇದೇತಿಂಗಳ ಮಕರಸಂಕ್ರಾಂತಿಯ ಉತ್ತರಾಯಣದ ಪರ್ವಕಾಲ ಬರುವ ಮುನ್ನ ಅರ್ಥಾತ್ ಜನವರಿ ೧೪– ತಾರಿಕು ಪುಷ್ಯಮಾಸ, ಬಹುಳ ಸಪ್ತಮೀದಿವಸ ಪರಮ ಪೂಜ್ಯ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸಾಕ್ಷಾತ್ ಶಿಷ್ಯರಾದಂಥಹ ಹಾಗೂ ಯಾವ ಗುರುಗಳ ಹೆಸರನ್ನು ಕೇಳಿದಾಕ್ಷಣವೇ ನಮಗೆಲ್ಲ ಮೂಲರಾಮಚಂದ್ರದೇವರ ಸ್ಮರಣೆ ಬರುವದೋ, ಅಷ್ಟೇಅಲ್ಲದೇ ತಪಸ್ವಿಗಳಾದ, ಮಹಾಮಹಿಮರಾದ,ನರಹರಿ ತೀರ್ಥರ ಆರಾಧನಾಮಹೋತ್ಸವ ವೆಂಬ ಪರ್ವಕಾಲದ ಸುಯೋಗ ಎಂಬುವದು ನಮಗೆ, ನಿಮಗೆಲ್ಲ ಒದಗಿಬಂದಿದೆ. ಪರ್ವಕಾಲದಲ್ಲಿ ತೀರ್ಥಸ್ನಾನ, ಸೇತುಸ್ನಾನ, ಗಂಗಾಸ್ನಾನ ಇವೇಮೊದಲಾದ ಸ್ನಾನ, ಹಾಗು ತರ್ಪಣಾದಿಗಳು ಅತ್ಯಂತ ಪುಣ್ಯಕರವಾದುದು. ಎಂದು ಶಾಸ್ತ್ರಗಳ ಅಭಿಪ್ರಾಯ. ಇರಲಿ, ಆದರೆ, ನಮ್ಮ ಸುಯೋಗವೇನೋ ಎಂಬಂತೆ ಎರಡು ಪರ್ವಕಾಲಗಳು ಒಟ್ಟಿಗೆಬಂದಿದೆ. ಅದೇ ಈ ತಿಂಗಳ ವಿಶೇಷ. ಒಂದೆಡೆ ಸಂಕ್ರಾಂತಿಯ ಪರ್ವಕಾಲವಾದ್ದರಿಂದ ಜಲಸ್ನಾನ ಮುಖ್ಯವಾದರೆ, ಇನ್ನೊಂದೆಡೆ ಜ್ಞಾನ ಗಂಗಾಸ್ನಾನ ಹಾಗು ನರಹರಿ ತೀರ್ಥರ ಆರಾಧನಾ ನಿಮಿತ್ತವಾಗಿ ಶ್ರೀಪಾದರ ಚರಿತ್ರೆಯನ್ನು ತಿಳಿದುಕೊಳ್ಳುವದು ಹಾಗು ಅವರ ಕೃತಿಗಳನ್ನು ತಿಳಿದು ನರಹರಿತೀರ್ಥರಂತರ್ಯಾಮಿ

ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮೂಲರಾಮಚಂದ್ರದೇವರ ಅನುಗ್ರಹಕ್ಕೆ ಪಾತ್ರರಾಗುವಂತಹ ಸುಯೋಗ ಒದಗಿ ಬಂದಿದೆ. ಆದ್ದರಿಂದ ಪ್ರಕೃತವಾಗಿ ನರಹರಿತೀರ್ಥರಬಗ್ಗೆ ತಿಳಿಯೋಣ. ಬನ್ನಿ. ಒಟಿದೇಮಾತಿನಲ್ಲಿ ನರಹರಿ ತೀರ್ಥರಬಗ್ಗೆ ಹೇಳಬೇಕೆಂದರೆ, ಅವರಬಗ್ಗೆ ಎಷ್ಟು ಹೇಳಿದರೂ, ಎಷ್ಟುಕೇಳಿದರೂ, ಎಷ್ಟು ನೋಡಿದರೂ, ಎಷ್ಟು ತಿಳಿದರೂ ಕಡಿಮೆಯೇ. ಆದರೂಕೂಡ ಆಮಹಾಮಹಿಮರ ಬಗ್ಗೆ ಯಥಾಮತಿ ಕಿಂಚಿತ್ತು ಅಳಿಲು ಸೇವೆಯಂತೆ ತಿಳಿಯೋಣ ಬನ್ನಿ.

ನರಹರಿ ತೀರ್ಥರ ಬಗ್ಗೆ ತಿಳಿಯುವ ಮುನ್ನ ಸ್ವಲ್ಪ ಅವರತಂದೆಯಬಗ್ಗೆ, ಹಾಗೂ ಸ್ವಲ್ಪ ಪೂರ್ವಾಶ್ರಮದ ಚರಿತ್ರೆ, ಹಾಗು ಅವರ ಮನೆತನ ಇತ್ಯಾದಿಗಳ ಬಗ್ಗೆ ತಿಳಿದು ನಂತರ ಸ್ವಲ್ಪ ಅವರ ಜೀವನ ಚರಿತ್ರೆ, ಹಾಗು ಕೃತಿಗಳ ಬಗ್ಗೆ ತಿಳಿಯೊಣ.

ನರಹರಿ ತೀರ್ಥರ ಪೂರ್ವಾಶ್ರಮದ ತಂದೆಯ ಹೆಸರು-ನರಸಿಂಹ ಭಟ್ಟರು. ಎಂದು ಇವರು ಅನಂಗಭೀಮ ರಾಜನ ಬಳಿ ಮಹಾಮಂತ್ರಿಗಳಾಗಿದ್ದರು. ರಣರಂಗ ಧೀರರು, ರಾಜಕಾರಣಧುರಂಧರರು, ಆಗಿದ್ದರು. ಇಂತಹ ನರಸಿಂಹ ಭಟ್ಟರಿಗೆ ಶ್ಯಾಮಸುಂದರ ಎಂಬ ಮಗನಿದ್ದನು. ಅವನು ಎಲ್ಲಶಾಸ್ತ್ರಗಳಲ್ಲಿ ಮಹಾ ಮೇಧಾವಿಯಾದುದರಿಂದ ಶ್ಯಾಮಶಾಸ್ತ್ರಿ ಎಂದು ಕರೆಯಿಸಿಕೊಳ್ಳಲ್ಪಟ್ಟರು. ಒಂದೇ ಮಾತಿನಲ್ಲಿ ಇವರ ಪಾಂಡಿತ್ಯದಬಗ್ಗೆ ಹೇಳುವುದಾದರೆ,ಗೊದಾವರಿ ತಟದ ರಾಜಮಹೇಂದ್ರಿಯಲ್ಲಿ ಶೋಭನಭಟ್ಟರು ಪ್ರಚಂಡ ವಿದ್ವತ್ಸಭೆಯನ್ನು ಏರ್ಪಡಿಸಿದ್ದರು. ಆಸಭೆಯಲ್ಲಿ ಎಲ್ಲ ದೊಡ್ಡ ದೊಡ್ಡ ವಿದ್ವನ್ಮಣಿಗಳು ಆಸೀನರಾಗಿದ್ದರು. ಎಲ್ಲ ಶಾಸ್ತ್ರಗಳಲ್ಲಿ ವಾಕ್ಯಾರ್ಥಗಳು ಪ್ರಾರಂಭವಾಯಿತು. ನಾನಾ, ವಿಚಾರಗಳು ಹೊರ ಹೊಮ್ಮಿದವು. ಎಲ್ಲದರಲ್ಲಿಯೂ, ಶೋಭನಭಟ್ಟರದೇ ಎತ್ತಿದ ಕೈ ಆದರೆ ಅವರಿಗೆ ಸರಿಸಾಟಿಯಾಗಿ ಸೆಣೆದಾಡಿದವರೆಂದರೆ ಶ್ಯಾಮಶಾಸ್ತ್ರಿಗಳು. ಎಂದ ಮೇಲೆ ಎಂತಹ ಪ್ರಕಾಂಡ ಪಂಡಿತರೆಂದು ಗೊತ್ತಾಗುತ್ತದೆ.

ಇವರಿಗೆ ವಾದ, ವಾಕ್ಯಾರ್ಥಗಳು. ಇವೆಲ್ಲವೂ ನೀರು ಕುಡಿಯುವುದು ಎಷ್ಟು ಸುಲಭವೋ ಅಷ್ಟೇ ಸುಲಭ ವಾಗಿದ್ದಿತ್ತು.

ಶಾಮಶಾಸ್ತ್ರಿಗಳಿಗೆ ಕನ್ನಡ, ತೆಲುಗು, ಭಾಷೆಗಳಲ್ಲಿ ಪರಿಪೂರ್ಣತೆ ಎಂಬುವದಿತ್ತು. ಸಂಗೀತ, ನೃತ್ಯ,ಕಲೆಯಲ್ಲಿ ಅಪಾರವಾದ ಪ್ರತಿಭೆ. ಸಂಸ್ಕೃತವಂತೂ, ಅವರ ಮನೆ ಮಾತಾಗಿತ್ತು. ಇಂತಹ ಪ್ರಚಂಡ ಸಭೆಗೆ ಉತ್ತರ ಪಥದ ದಿಗ್ವಿಜಯಮಾಡಿಕೊಂಡು ಜಗದ್ಗುರು ಶ್ರೀಮಧ್ವಾಚಾರ್ಯರ ಆಗಮನವಾದ ಸಂದರ್ಭದಲ್ಲಿ ಆಚಾರ್ಯರ ವ್ಯಕ್ತಿತ್ವವೇ ಅದ್ಭುತವಾದ ದೇಹ ಸಾಮರ್ಥ್ಯ, ಉನ್ನತ ವ್ಯಕ್ತಿತ್ವ. ಜ್ಞಾನದಲ್ಲಿ ಸಾಕ್ಷಾತ್ ಸರಸ್ವತಿಯ ಪತಿ. ಶಕ್ತಿಯಲ್ಲಿ ವಾಯುದೇವರು. ಆದ್ದರಿಂದ ದಾಸರಾಯರು ಈ ರೀತಿ ಪೇಳುತಿಹರು. ಯುಕ್ತಿಯಲಿ ನೋಡೆ ಹನುಮಾವತಾರ. ಭಕ್ತಿಯಲಿ ನೋಡೆ ಭೀಮಾವತಾರ. ಇತ್ಯಾದಿಯಾಗಿ ಇಂತಹ ಮೂರನೇ ಅವತಾರರಾದ ಶ್ರೀಮಧ್ವಾಚಾರ್ಯರ ಜೊತೆ ಶಾಮಶಾಸ್ತ್ರಿಗಳು ವಾಕ್ಯಾರ್ಥ ಆರಂಭಿಸಿದರು. ನಂತರ ಆಚರ್ಯರ ಎದುರು ಸೋತು ಕಾಲಿಗೆ ಬಿದ್ದರು. ತಮ್ಮನ್ನು ಉದ್ಧರಿಸಲು ಕೇಳಿಕೊಂಡರು.

ಶ್ರೀಮದಾಚಾರ್ಯರು ತಪ್ತ ಮುದ್ರೆಯನು ನೀಡುವುದರ ಮೂಲಕ ವೈಷ್ಣವದೀಕ್ಷೆಯನು ನೀಡಿ ಶಿಷ್ಯರನ್ನಾಗಿ ಸ್ವೀಕರಿಸಿ, ಚತುರ್ಥಾಶ್ರಮವನ್ನು ನೀಡಿದರು. ನಂತರ ಶ್ರೀಮದಾಚಾರ್ಯರ ಆದೇಶದ ಮೇರೆಗೆ ಕಲಿಂಗದೇಶದ ದೊರೆಯಾದ ಗಜಪತಿರಾಜನು ಆಕಸ್ಮಿಕವಾಗಿ ಪಂಚತ್ವವನ್ನು ಹೊಂದಲು ರಾಜ್ಯವು ಅರಾಜಕತೆಯುಳ್ಳದ್ದಾಯಿತು. ಆಗ ಮಂತ್ರಿಮಂಡಲ, ಹಾಗು ಪ್ರಜಾಸಮೂಹವೂ, ಚಿಂತೆಯಿಂದ ಕೂಡಿರಲು ಮತ್ತು ಗಜರಾಜನು ಹೂವಿನ ಹಾರವನ್ನು ಕೊರಳಲೊಳು ಹಾಕಲು ರಾಜನಾಗಲು ಒಪ್ಪಿ ೧೨- ವರ್ಷಗಳವರೆಗೆ ರಾಜ್ಯಭಾರವನು ಮಾಡಿ ತದನಂತರ ರಾಜಕುಮಾರನಿಗೆ ಒಪ್ಪಿಸಿ ಅಲ್ಲಿಂದ ಹೊರಟು ಬರುವಾಗ ಎಲ್ಲರೂ ಕೂಡ ಎನನ್ನಾದರೂ ದಕ್ಷಿಣೆಯನ್ನು ಸ್ವೀಕರಿಸಬೇಕೆಂದಾಗ ನೀವು ಏನನ್ನಾದರೂ ಕೊಡಬೇಕೆಂದಿದ್ದರೆ ಕೋಶದಲ್ಲಿರುವ ಸೀತಾರಾಮರ ವಿಗ್ರಹಗಳನ್ನು ಕೊಡಿ ಎಂದಾಗ ಕೊಟ್ಟರು. ಇವರು ಗಡಿ ದಾಟಿದಾಕ್ಷಣವೇ ರಾಜ್ಯದಲ್ಲಿ ಬೆಂಕಿಯು ಹತ್ತಿತು. ಆಕಡೆ ಶ್ರೀಮದಾಚಾರ್ಯರು ರಾಮದೇವರು ಬಂದಾಕ್ಷಣವೇ ಕಾರ್ತಿಕ ದ್ವಾದಶಿ ಸಾಯಂ ಸ್ನಾನಾದಿಗಳನ್ನು ಮಾಡಿ ಪೂಜೆ ಮೊದಲಾದವುಗಳನ್ನುಅರ್ಪಿಸಿದರು. ಇದೇರೀತಿ ೬ತಿಂಗಳವರೆಗೆ ನೆರವೆರಿಸಿ, ತದನಂತರ ಪದ್ಮನಾಭತೀರ್ಥರು, ತದನಂತರ ನರಹರಿ ತೀರ್ಥರು ಈರೀತಿಯಾಗಿ ಮುಂದಿನ ಗುರುಪರಂಪರೆಯು ಆರಾಧಿಸುತ್ತಾ ಬಂದಿದೆ. ಇನ್ನು ಇವರ ಕೃತಿಗಳು ಹರಿಯೇ ಇದು ನಿನಗೆ ಸರಿಯೇ ಇತ್ಯಾದಿ ಕನ್ನಡಹಾಡುಗಳನ್ನು ರಚಿಸಿದ್ದಾರೆ. ಇಂತಹ ಮಹನೀಯರಾದ ನರಹರಿ ತೀರ್ಥರನ್ನು ನಾವು, ನೀವೆಲ್ಲಸೇರಿ ಆರಾಧಿಸಿ ಅವರ ಅಂತರ್ಯಾಮಿಯಾದ ಭಾರತಿರಮಣ ಮುಖ್ಯಪ್ರಾಣಾಂತರ್ಗತ ಶ್ರೀಮೂಲ ರಾಮಚಂದ್ರ ದೇವರ ಅನುಗ್ರಹಕ್ಕೆ ಪಾತ್ರರಾಗೋಣ.